

ಕೆಳಗಿನ ಶಿವಾಲಯ




ಯಲ್ಲಮ್ಮ ದೇವಾಲಯ

ಮಧ್ಯದಲ್ಲಿರುವ ಕ್ರಿ.ಶ. 699ರಲ್ಲಿ ವಿನಯಾದಿತ್ಯನ ತಾಯಿ ವಿನಯವತಿ ನಿರ್ಮಿಸಿದ ಜಂಬುಲಿಂಗ ದೇವಾಲಯ, ತ್ರೈಪುರುಷರಿಗಾಗಿಯೇ (ಬ್ರಹ್ಮ, ವಿಷ್ಣು ಮತ್ತು ಮಹೇಶ್ವರ) ನಿರ್ಮಿಸಿದ, ಕರ್ನಾಟಕದ ಮೊಟ್ಟ ಮೊದಲ ತ್ರಿಕೂಟ ದೇವಾಲಯವಾಗಿದೆ. ಅಗಸ್ತ್ಯ ತೀರ್ಥದ ಪಶ್ಚಿಮ ದಂಡೆಯ ಮೇಲಿರುವ ಕಲ್ಯಾಣ ಚಾಳುಕ್ಯಕಾಲದ, ಯಲ್ಲಮ್ಮ (ಮೂಲತಃ ದತ್ತಾತ್ರೇಯ) ದೇವಾಲಯದ ಶಿಖರ ವೇಸರ ಶೈಲಿಯಲ್ಲಿದ್ದು, ಅಲ್ಲೇ ಪೂರ್ವದಂಡೆಯ ಮೇಲಿನ ಭೂತನಾಥ ದೇವಾಲಯ ದ್ರಾವಿಡ ವಿಮಾನ ಮಾದರಿಗಳಿಂದ ಸಂಪೂರ್ಣ ವಿಭಿನ್ನವಾಗಿದೆ.



ಭೂತನಾಥ ದೇವಾಲಯಗಳ ಸಮೂಹ



ಮಹಾನಟ

## ಶಾಸನಗಳು

ಶಾಸನ ಸಂಪತ್ತಿನಲ್ಲಿ ಬಾದಾಮಿ ಬಹಳ ವಿಪುಲವಾಗಿದೆ. ಅತ್ಯಂತ ಪ್ರಾಚೀನವಾದ ಇಲ್ಲಿಯ ಶಾಸನವೆಂದರೆ ಒಂದನೆಯ ಪುಲಕೇಶಿಯ ಶಕ 465 (ಕ್ರಿ.ಶ. 543)ರ ಬಂಡೆಗಲ್ಲು ಶಾಸನ. ಈ ಶಾಸನವು ಬಾದಾಮಿ ನಗರಕ್ಕೆ ಕೆಳಗಿನಿಂದಲೂ, ಮೇಲಿನಿಂದಲೂ ಅಭೇಧ್ಯವಾದ ಕೋಟೆಯನ್ನು ನಿರ್ಮಿಸಲಾಯಿತೆಂದು ಹೇಳುತ್ತದೆ. ವಸ್ತುಸಂಗ್ರಹಾಲಯದ ಆವರಣದಲ್ಲಿ ಬಂಡೆಯೊಂದರ ಮೇಲೆ ಬರೆದಿರುವ ಪಲ್ಲವ ನರಸಿಂಹವರ್ಮನ 13ನೇ ರಾಜ್ಯವರ್ಷದ ಶಾಸನ ಆತನ ಬಾದಾಮಿ ಮೇಲಿನ ವಿಜಯವನ್ನು ತಿಳಿಸುತ್ತದೆ. ಗುಹಾಲಯಗಳ ಬಳಿಯ ಬಂಡೆಗಳ ಮೇಲೆ ಬರೆದಿರುವ ಕಿರುಶಾಸನಗಳು ಚಾಳುಕ್ಯ ಕಾಲದಲ್ಲಿ ಅಲ್ಲಿ ಕೆಲಸ ಮಾಡಿದ ಓಜರ, ಶಿಲ್ಪಿಗಳ ಹೆಸರುಗಳನ್ನೂ, ಯಾತ್ರಾರ್ಥಿಗಳ ಹೆಸರುಗಳನ್ನೂ ತಿಳಿಸುತ್ತವೆ. ವಿಜಯನಗರ ಕಾಲದ ಶಾಸನಗಳು ಕೈಗೊಂಡ ದೇವಾಲಯಗಳ ದುರಸ್ತಿ ಕಾರ್ಯಗಳನ್ನು ಮತ್ತು ಕೋಟೆಯನ್ನು ಬುರುಜುಗಳ ನಿರ್ಮಾಣದ ಮೂಲಕ ಬಲಪಡಿಸಿದುದನ್ನು ಹೇಳುತ್ತವೆ. ಬಂಡೆಯೊಂದರ ಮೇಲೆ ಬರೆದಿರುವ ಪ್ರಸಿದ್ಧ ಕಪ್ಪೆ ಅರಭಟ್ಟನ ಶಾಸನವು (ಸು. 8ನೇ ಶತಮಾನ) ಚಾಳುಕ್ಯ ಮಹಾಪುರುಷನೊಬ್ಬನ ಶಕ್ತಿ, ಸಾಮರ್ಥ್ಯವನ್ನು ವರ್ಣಿಸುತ್ತದೆ. ಈ ಶಾಸನವು ಕನ್ನಡದಲ್ಲಿ ತ್ರಿಪದಿ ಛಂದಸ್ಸಿನಲ್ಲಿ ಬರೆದ ಪ್ರಪ್ರಥಮ ಶಾಸನವಾಗಿದೆ.

## ವಸ್ತು ಸಂಗ್ರಹಾಲಯ



1982ರಲ್ಲಿ ಸ್ಥಾಪಿತವಾದ ಈ ಸಂಗ್ರಹಾಲಯದಲ್ಲಿ ಬಾದಾಮಿ ಮತ್ತು ಅದರ ಸುತ್ತಮುತ್ತಲಿನಲ್ಲಿ ದೊರೆತ ಶಿಲ್ಪಗಳು, ಶಾಸನಗಳು, ವಾಸ್ತು ಭಾಗಗಳು ಮುಂತಾ ದುವುಗಳನ್ನು ಪ್ರದರ್ಶಿಸಲಾಗಿದೆ. ಮುಂದಿನ ವರಾಂಡದ ತೆರೆದ ಗ್ಯಾಲರಿಯಲ್ಲಿ ಜೈನ ಶಿಲ್ಪಗಳು, ನಟರಾಜ, ನಮದಿ, ಕೀರ್ತಿ ಮುಖ, ಶೃಂಗಾರದ ಶಿಲ್ಪಗಳು ಹಾಗೂ ಮತ್ತಿತರ ವಾಸ್ತು ಭಾಗಗಳನ್ನು ಪ್ರದರ್ಶಿಸಲಾಗಿದೆ. ಒಳಗಡೆ ನಾಲ್ಕು ಪರಿಪೂರ್ಣವಾಗಿ ಸಜ್ಜಾದ ಗ್ಯಾಲರಿಗಳಿವೆ. ಇಲ್ಲಿಯ ಪ್ರದರ್ಶನಗಳೆಂದರೆ ಎರಡೂ ಮುಖಗಳಲ್ಲಿ ಕೊರೆಯಲಾಗಿರುವ ಒಂದು ಮಕರ ತೋರಣ, ಕಾಲಾರಿಯಾಗಿ ಶಿವ, ತ್ರಿಪುರಾಂತಕ, ಭೈರವ, ನಟರಾಜ, ನರಸಿಂಹ ಇತ್ಯಾದಿ ಸ್ತ್ರೀ ದೇವತಾ ಶಿಲ್ಪಗಳಲ್ಲಿ ಅಪರೂಪದ ಲಜ್ಜಾಗೌರಿ, ಮಾತೃಕೆಯರು, ಭೈರವಿ ಇತ್ಯಾದಿ. ಭಾಗವತ ಮತ್ತು ಕೃಷ್ಣಲೀಲೆಗಳನ್ನು ಪ್ರದರ್ಶಿಸುವ ಕಟ್ಟು ಶಿಲ್ಪಗಳು ಅಪೂರ್ವವಾದುವು. ಶಿಡಿಲಫಡಿಯ ಬೃಹತ್ತಾದ ಪರಿಮಾಣ ಬದ್ಧವಾದ ಮಾದರಿ ಪ್ರಾಗೈತಿಹಸಿಕ ಜನ ಜೀವನವನ್ನು ತೋರಿಸುವ ಪಾರದರ್ಶಕ ಗಾಜಿನ ಚಿತ್ರಗಳು, ಹೊಸದಾಗಿ ಪ್ರದರ್ಶಿಸಿರುವ ಮಾನವ ಜೀವ ವಿಕಾಸದ ಚಿತ್ರಗಳು, ಪ್ರಾಗೈತಿಹಾಸಿಕ ಚಿತ್ರಗಳು ಮತ್ತು ಶಿಲಾಯುಧಗಳು; ಸಂರಕ್ಷಣಾ ವಿಭಾಗ, ಉತ್ಖನನ, ಶಾಸನ ಮತ್ತು ಹೊಸದಾಗಿ ಕಂಡುಹಿಡಿಯಲಾಗಿರುವ ಕಲ್ಲಿನ ಖನಿ ಮತ್ತು ಕಬ್ಬಿಣದ ಉಪಕರಣಗಳು ಇತ್ಯಾದಿ ಬಾದಾಮಿಯ ಬಹುಮುಖೀ ಸಂಸ್ಕೃತಿಯನ್ನು ತಿಳಿಯಲು ಉಪಯುಕ್ತವಾಗಿವೆ. ಮೂರನೆಯ ಗುಹಾಲಯದಲ್ಲಿ ಕಂಡು ಬಂದ ವರ್ಣಚಿತ್ರದ ಒಂದು ರೇಖಾ ಮಾದರಿ ಇಲ್ಲಿಯ ಇನ್ನೊಂದು ಮುಖ್ಯ ಪ್ರದರ್ಶಿತವಸ್ತು. ತ್ರಿಭಾಷಾ ಸ್ಪರ್ಶ ಪರದೆಯ ವ್ಯವಸ್ಥೆ, ಐಹೊಳೆ, ಬಾದಾಮಿ, ಪಟ್ಟದಕಲ್ಲುಗಳ ಇತಿಹಾಸ, ವಾಸ್ತು-ಶಿಲ್ಪಕಲೆಯ ಬಗ್ಗೆ ಮಾಹಿತಿಗಳನ್ನು ನೀಡುತ್ತದೆ. ವಸ್ತುಸಂಗ್ರಹಾಲಯವು ಪ್ರತಿದಿನ ಬೆಳಿಗ್ಗೆ 8.00 ರಿಂದ ಸಂಜೆ 5.00 ಗಂಟೆಯವರೆಗೆ ತೆರೆದಿರುತ್ತದೆ.



**ಸಂದರ್ಶನದ ಸಮಯ:**

**ವಸ್ತು ಸಂಗ್ರಹಾಲಯ:** ಬೆಳಿಗ್ಗೆ 9 ರಿಂದ 5 ಗಂಟೆ
**ದೇವಾಲಯಗಳು:**
ಸೂರ್ಯೋದಯದಿಂದ ಸೂರ್ಯಾಸ್ತಮದವರೆಗೆ
**ವಸ್ತು ಸಂಗ್ರಹಾಲಯದ ಪ್ರವೇಶ ಶುಲ್ಕ :**
ಭಾರತ, ಸಾರ್ಕ್ ಮತ್ತು ಬಿಮ್‌ಸ್ಟೆಕ್ ರಾಷ್ಟ್ರಗಳ ಪ್ರಜೆಗಳಿಗೆ : ₹ 5
ಇತರ ರಾಷ್ಟ್ರಗಳ ಪ್ರಜೆಗಳಿಗೆ: ₹ 100
(15 ವರ್ಷಗಳ ಒಳಗಿನ ಮಕ್ಕಳಿಗೆ ಉಚಿತ ಪ್ರವೇಶ)
ವೀಡಿಯೋಗ್ರಫಿ ಶುಲ್ಕ ಒಂದು ಸ್ಮಾರಕಕ್ಕೆ ₹ 25



**ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:**

**ಪುರಾತತ್ವ ಸಹಾಯಕರು**
ಭಾರತೀಯ ಪುರಾತತ್ವ ಸರ್ವೇಕ್ಷಣ
ಬಾದಾಮಿ ಉಪ ವಲಯ, ಬಾದಾಮಿ
ದೂ: 08357-220047

**ಅಧೀಕ್ಷಕ ಪುರಾತತ್ವವಿದರು**
ಭಾರತೀಯ ಪುರಾತತ್ವ ಸರ್ವೇಕ್ಷಣ
ಧಾರವಾಡ ವಲಯ, ಧಾರವಾಡ
ದೂ: 0836-2443678 ಫ್ಯಾಕ್ಸ್: 0836-2447539
ಈ-ಮೇಲ್: circledha.asi@gmail.com


**ಭಾರತೀಯ ಪುರಾತತ್ವ ಸರ್ವೇಕ್ಷಣ**

# ಬಾದಾಮಿ



PATRIMONIO MUNDIAL • WORLD HERITAGE • PATRIMOINE MONDIAL


ಭಾರತೀಯ ಪುರಾತತ್ವ ಸರ್ವೇಕ್ಷಣ
ಧಾರವಾಡ ವಲಯ, ಧಾರವಾಡ


सत्यमेव जयते
प्रत्नकीर्तिमपावृणु

# ಪರಿಚಯ



ಬಾದಾಮಿ (ಅಕ್ಷಾಂಶ 170° 571' ರೇಖಾಂಶ 750° 521') ಕರ್ನಾಟಕದ ಬಾಗಲಕೋಟೆ ಜಿಲ್ಲೆಯಲ್ಲಿದೆ. ಪಶ್ಚಿಮ ಚಾಳುಕ್ಯ ರಾಜ್ಯದಲ್ಲೇ ಅತ್ಯಂತ ಮನೋಹರವಾದ ನೈಸರ್ಗಿಕ ಹಿನ್ನೆಲೆ ಮತ್ತು ಅತ್ಯಂತ ಸುಂದರವಾದ ಸ್ಮಾರಕಗಳನ್ನು ಹೊಂದಿರುವ ಪ್ರದೇಶ. ಆರನೆಯ ಶತಮಾನದಿಂದ 16ನೇ ಶತಮಾನದವರೆಗಿನ ಗುಹಾಲಯಗಳ ಸರಣಿಯಲ್ಲಿ ಮತ್ತು ಹಲವಾರು ನಿರ್ಮಿತಿ ದೇಗುಲಗಳಲ್ಲಿ ಮತ್ತು ಕೋಟೆಯ ಗೋಡೆಗಳಲ್ಲಿ ಈ ಸ್ಥಳದ ಪುರಾತತ್ವಿಕ ಮಹತ್ವವಿರುವುದು.

## ಮಾರ್ಗ

ಬಾಗಲಕೋಟೆ ಜಿಲ್ಲಾ ಕೇಂದ್ರದಿಂದ ಬಾದಾಮಿಯು 36 ಕಿ.ಮೀ. ದೂರದಲ್ಲಿದೆ. ಇಲ್ಲಿಯ ರೈಲ್ವೇ ನಿಲ್ದಾಣ ಹುಬ್ಬಳ್ಳಿ-ಸೋಲಾಪುರ ಬ್ರಾಡ್‌ಗೇಜ್ ಲೈನಿನಲ್ಲಿದೆ. ಗೋವಾ ಇಲ್ಲಿಗೆ ಸಮೀಪದ ವಿಮಾನ ನಿಲ್ದಾಣ. ಬಾದಾಮಿಗೆ 125 ಕಿ.ಮೀ. ದೂರದ ಹುಬ್ಬಳ್ಳಿ ಅಂತರ್ದೇಶೀಯ ವಿಮಾನ ಯಾನಕ್ಕೆ ಸೌಲಭ್ಯಗಳನ್ನು ಹೊಂದಿದೆ. ಬಾದಾಮಿಯಲ್ಲಿ ಪ್ರವಾಸಿಗಳಿಗೆ ಹೆಚ್ಚಿನ ಸೌಕರ್ಯಗಳಿವೆ.

## ಪುರಾಣ

ಸ್ಥಳ ಪುರಾಣದ ಪ್ರಕಾರ ಬಾದಾಮಿ ಎಂಬ ಹೆಸರು ವಾತಾಪಿ ಮತ್ತು ಇಲ್ವಲರೆಂಬ ರಾಕ್ಷಸ ಸಹೋದರರಿಂದ ಬಂದಿತು. ಇವರಲ್ಲಿ ಇಲ್ವಲನು ವಾತಾಪಿಯನ್ನು ಕೊಂದು ಅಡಿಗೆ ಮಾಡಿ ಬಂದ ಅತಿಥಿಗಳಿಗೆ ಭೋಜನವಿತ್ತು "ವಾತಾಪಿ ಹೊರಕ್ಕೆ ಬಾ" ಎಂದು ಕರೆಯುತ್ತಿದ್ದನು. ವಾತಾಪಿ, ಅತಿಥಿಗಳ ಹೊಟ್ಟೆಯೊಳಗಿನಿಂದ, ಹೊಟ್ಟೆ ಸೀಳೀ ಹೊರಗೆ ಬರುತ್ತಿದ್ದನು. ಸತ್ತ ಅತಿಥಿಗಳ ದೇಹವನ್ನು ರಾಕ್ಷಸ ಸಹೋದರರಿಬ್ಬರೂ ತಿಂದು ಸಂತುಷ್ಟರಾಗುತ್ತಿದ್ದರು. ಒಂದು ದಿನ ಅಗಸ್ತ್ಯ ಋಷಿಯು ಬಾದಾಮಿಗೆ ಬಂದಾಗ ರಾಕ್ಷಸರಿಬ್ಬರೂ ಎಂದಿನಂತೆ ತಮ್ಮ ಚಾಲಾಕನ್ನು ಪ್ರದರ್ಶಿಸಲು ಮುಂದಾದರು. ಆದರೆ ಅಗಸ್ತ್ಯರು ವಾತಾಪಿ ಹೊಟ್ಟೆಯಿಂದ ಹೊರಕ್ಕೆ ಬರುವುದಕ್ಕೆ ಮುಂಚೆಯೇ ತಮ್ಮ ಹೊಟ್ಟೆಯ ಮೇಲೆ ಕೈಯ್ಯಾಡಿಸಿ "ವಾತಾಪಿ ಜೀರ್ಣೋಭವ" ಎಂದು ಉಚ್ಛರಿಸಿದರು. ಅದರಂತೆ ವಾತಾಪಿ ಅಗಸ್ತ್ಯರ ಹೊಟ್ಟೆಯೊಳಗೆ ಜೀರ್ಣವಾದನು. ವಾತಾಪಿ ಇಲ್ವಲರು ಬಾದಾಮಿಯ ಹಾಗೂ ಐಹೊಳೆಯ ಬೆಟ್ಟಗಳಾಗಿದ್ದಾರೆ ಎಂಬುದು ಈಗಲೂ ಜಾನಪದ ನಂಬಿಕೆಯಾಗಿದೆ.

## ಚಾರಿತ್ರಿಕ ಹಿನ್ನೆಲೆ

ಬಾದಾಮಿಯ ಇತಿಹಾಸವನ್ನು ಪ್ರಾಗೈತಿಹಾಸಿಕ ಕಾಲದಿಂದ ಗುರುತಿಸಬಹುದು. ಶಾಸನಾಧಾರಗಳಿಂದ ಈ ಸ್ಥಳ ವಾತಾಪಿ / ಬಾದಾಮಿ ಎಂದು ತಿಳಿದುಬರುತ್ತದೆ. ಚಾಳುಕ್ಯ ವಂಶದ ಮೊದಲ ಪ್ರಬಲ ದೊರೆಯಾದ ಒಂದನೆಯ ಪುಲಕೇಶಿಯು ವಾತಾಪಿಗೆ ಬಂದು ದುರ್ಗಮ ಕೋಟೆಯನ್ನು ಕಟ್ಟಿ ಅದನ್ನು ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡನು. ಈ ಪಟ್ಟಣವು ಅಲ್ಲಿ ವಿಶಾಲ ಸರೋವರವನ್ನು ಸುತ್ತೂವರೆದಿದ್ದು ಇಡೀ ಪಟ್ಟಣವು ಕೋಟೆ, ಬುರುಜುಗಳನ್ನು ಹೊಂದಿರುವ ಗಿರಿ ಶ್ರೇಣಿಯಿಂದ ಸುತ್ತುವರೆದಿದೆ. ಈ ಬೆಟ್ಟಗಳಲ್ಲಿ ಉತ್ತರದ ಬೆಟ್ಟವನ್ನು "ಬಾವನ್ ಬಂಡೆ ಕೋಟೆ" ಅಂದರೆ 52 ಬೃಹತ್ ಬಂಡೆಗಳನ್ನು ಹೊಂದಿರುವ ಕೋಟೆ ಎಂದೂ, ದಕ್ಷಿಣ ಗಿರಿಯನ್ನು "ರಣಮಂಡಲ ಕೋಟೆ" ಎಂದು ಕರೆಯುತ್ತಾರೆ. ಈ ಹೆಸರು ರಾಮಾಯಣ "ಮಹಾಭಾರತ" ಮತ್ತು "ಮಹಾಕೊಟೇಶ್ವರ ಮಹಾತ್ಮೆ"ಯಲ್ಲಿ ಕಾಣಬರುತ್ತದೆ. ಇತಿಹಾಸಿಕ ಯುಗದಲ್ಲಿ ಈ ಪ್ರಾಂತ್ಯವನ್ನು ಮೌರ್ಯರು ತದನಂತರ ಶಾತವಾಹನರ ಆಳ್ವಿಕೆಯಲ್ಲಿತ್ತು. ಟಾಲೆಮಿಯು ತನ್ನ "ಜಿಯೋಗ್ರಫಿ"ಯಲ್ಲಿ (ಕ್ರಿ.ಶ. 2ನೇ ಶತಮಾನ) ಈ ಸ್ಥಳವನ್ನು "ಬದಾಮಿಯೋಯ್" ಎಂದು ಕರೆದಿದ್ದಾನೆ. ಒಂದನೆಯ ಪುಲಕೇಶಿಯ ಕಾಲದಲ್ಲಿ ಇಲ್ಲಿಯ ಕೋಟೆಯನ್ನು ಭದ್ರಪಡಿಸಿ ರಾಜಧಾನಿಯನ್ನಾಗಿ ಮಾಡಿ ಕೊಳ್ಳಲಾಯಿತು. ಕ್ರಿ.ಶ. 543ರ ಬಾದಾಮಿಯ ಬಂಡೆಗಲ್ಲು ಶಾಸನ ಈ ಸ್ಥಳದ ಮಹತ್ವವನ್ನು ತಿಳಿಸುವುದಲ್ಲದೆ ಈ ಸ್ಥಳ ಕ್ರಿ.ಶ. 753ರವರೆಗೆ ರಾಜಧಾನಿಯಾಗಿಯೇ ಉಳಿದಿತ್ತು ಎಂದು ತಿಳಿಸುತ್ತದೆ. ಕ್ರಿ.ಶ. 642-55ರ ಮಧ್ಯಕಾಲದಲ್ಲಿ ಬಾದಾಮಿ ಪಲ್ಲವರ ಅಧೀನದಲ್ಲಿದ್ದುದನ್ನು ಬಿಟ್ಟರೆ ಉಳಿದ ಸಂಪೂರ್ಣ ಕಾಲ ಕರ್ನಾಟಕ ರಾಜರ ಅಧೀನದಲ್ಲಿಯೇ ಇತ್ತು. ಬಾದಾಮಿಯಲ್ಲಿ ಕೆಲವಾರು ವಿಜಯನಗರದ ಅರಸರ ಮತ್ತು ಆದಿಲ್‌ಷಾಹಿ ಹಾಗೂ ಸವಣೂರಿನ ನವಾಬರ ಶಾಸನಗಳು ಇವೆ. ಹೀಗಾಗಿ ಬಾದಾಮಿ ಕರ್ನಾಟಕದ ಇತಿಹಾಸ ಮತ್ತು ಸಂಸ್ಕೃತಿಯ ಕ್ಷೇತ್ರದಲ್ಲಿ ಮಹತ್ತರ ಪಾತ್ರವಹಿಸಿದೆ.



ರಣಮಂಡಲ ಕೋಟೆ

# ವಾಸ್ತುನೋಟ



ರಾಜಕೀಯ ಸ್ಥಿರತೆ, ಶಾಂತಿಯುತ ವಾತಾವರಣದಿಂದೊಡಗೂಡಿದ ಅತುಲವಾದ ಐಹಿಕ ಪ್ರಗತಿ ಮತ್ತು ಉನ್ನತ ಮಟ್ಟದ ಧಾರ್ಮಿಕ ಸಹಿಷ್ಣುತೆಯನ್ನು ಹೊಂದಿದ್ದ ಚಾಳುಕ್ಯ ಸಾಮ್ರಾಜ್ಯ ಸರ್ವತೋಮುಖವಾದ ಪ್ರಗತಿಯನ್ನು, ಅದರಲ್ಲೂ ಕಲೆ, ವಾಸ್ತು, ಸಾಹಿತ್ಯ, ಆಡಳಿತ ಮುಂತಾದ ಕ್ಷೇತ್ರಗಳಲ್ಲಿ ಹೊಂದಿತು. ದಕ್ಷಿಣ ಭಾರತಕ್ಕೆ ಸಂಬಂಧಿಸಿದಂತೆ ಮೊಟ್ಟ ಮೊದಲ ಬಾರಿಗೆ ಧಾರ್ಮಿಕ ವಾಸ್ತು ಕ್ಷೇತ್ರದಲ್ಲಿ ಹೊಸ ಹುರುಪು ಮೂಡಿಬಂದಿತು. ಔಪಯೋಗಿಕವಾಗಿಯೂ, ಸೌಂದರ್ಯಾತ್ಮಕವಾಗಿಯೂ ಇರುವಂತಹ ದೇವಾಲಯ ಮಾದರಿಗಳನ್ನು ಸಿದ್ಧಪಡಿಸಲು ಅನೇಕ ಪ್ರಯೋಗಗಳು ಐಹೊಳೆ, ಬಾದಾಮಿ ಮತ್ತು ಪಟ್ಟದಕಲ್ಲು ಮುಂತಾದ ಕಡೆಗಳಲ್ಲಿ ನಡೆದವು.



ಭೂತನಾಥ ದೇವಾಲಯಗಳು (ಉತ್ತರ ಸಮೂಹ) ಅಥವಾ ತಟ್ಟುಕೋಟಿ ದೇವಾಲಯ

ಸಮಕಾಲೀನವಾಗಿ ಬಳಕೆಯಲ್ಲಿದ್ದು ದಾಕ್ಷಿಣಾತ್ಯ ಮತ್ತು ಔತ್ತರೇಯ ವಾಸ್ತು ಶೈಲಿಗಳೊಂದಿಗೆ ಅನೇಕ ಸ್ಥಳೀಯ ವಾಸ್ತು ರೂಪಗಳನ್ನು ಸಮಯೋಚಿತವಾಗಿ ಬೆರೆಸಿ ದೇವಾಲಯಗಳನ್ನು ರಚಿಸಲಾಯಿತು. ಬಾದಾಮಿ ಚಾಳುಕ್ಯರ ಮಹೋನ್ನತ ಕೊಡುಗೆ ಎಂದರೆ ದಾಕ್ಷಿಣಾತ್ಯ ದ್ರಾವಿಡ ವಿಮಾನ ಮತ್ತು ಔತ್ತರೇಯ ನಗರ ಪ್ರಾಸಾದಗಳ ಮಾದರಿಗಳನ್ನು, ಐಹೊಳೆಯಲ್ಲಿ ಪ್ರಾರಂಭವಾದ, ಬಾದಾಮಿಯಲ್ಲಿ ಮುಂದುವರೆದ ಮತ್ತು ಪಟ್ಟದಕಲ್ಲಿನಲ್ಲಿ ಪರಿಸಮಾಪ್ತವಾದ ಸರಣಿ ಪ್ರಯೋಗಗಳ ಮುಖಾಂತರ ವಿಕಸಿತಗೊಳಿಸಿದ್ದು. ಪಲ್ಲವರೊಂದಿಗೆ ಆಗಾಗ್ಗೆ ನಡೆಯುತ್ತಿದ್ದ ಜಗಳಗಳು ಇಬ್ಬರಿಗೂ ಅನುಕೂಲಕರವಾಗಿ ಒದಗಿ ಬಂದು, ಹೊಸ ಹೊಸ ವಾಸ್ತು ಹಾಗೂ ಮಾದರಿಗಳ ಉಗಮ ಮತ್ತು ವಿಕಾಸಕ್ಕೆ ಕಾರಣವಾದವು.

# ಸ್ಮಾರಕಗಳು



ಎರಡು ಶತಮಾನಗಳಿಗೂ ಮೀರಿ ಆಳ್ವಿಕೆ ನಡೆಸಿದ, ದಖನ್ನನ್ನು ಆಳಿದ ಅತಿಮುಖ್ಯವಾದ ರಾಜವಂಶವಾದ ಬಾದಾಮಿ ಚಾಳುಕ್ಯ ವಂಶ, ವಾಸ್ತು, ಕಲೆ, ಧರ್ಮ, ಸಾಹಿತ್ಯ ಕ್ಷೇತ್ರಗಳನ್ನು ಹೆಚ್ಚು ಶ್ರೀಮಂತಗೊಳಿಸಿದರು. ಕ್ರಿ.ಶ. 19ನೇ ಶತಮಾನದವರೆಗೆ ರಾಜಕೀಯವಾಗಿ ಬಾದಾಮಿ ಒಂದು ಮುಖ್ಯಕೇಂದ್ರವಾಗಿತ್ತು. ಕ್ರಮವಾಗಿ ರಾಷ್ಟ್ರಕೂಟರು, ಕಳಚೂರ್ಯರು. ದೇವಗಿರಿಯ ಸೇವುಣರು, ವಿಜಯನಗರದರಸರು ನಂತರ ಟೀಪು ಬಾದಾಮಿ ಪ್ರಾಂತ್ಯವನ್ನಾಳಿದವರು. ಈ ಕಾಲಮಾನಗಳಲ್ಲಿ ಅನೇಕ ಧಾರ್ಮಿಕ ಹಾಗೂ ಸೈನಿಕ ವಾಸ್ತು ರೂಪಗಳು ನಿರ್ಮಾಣಗೊಂಡವು. ಬಾದಾಮಿಯ ಈ ಎಲ್ಲಾ ರಾಚನಿಕ ಹಾಗೂ ಗುಹಾತ್ಮಕ ಸ್ಮಾರಕಗಳು ಅಲ್ಲಿಯ ಅಗಸ್ತ್ಯ ತೀರ್ಥದ ಸುತ್ತ ಮುತ್ತಲಲ್ಲಿವೆ.


ಉತ್ತರ ಭಾಗದ ಬೆಟ್ಟದ ಮೇಲಿರುವ ತೆರೆದ ಮಂಟಪಗಳು ಚಾಳುಕ್ಯ ಮತ್ತು ರಾಷ್ಟ್ರಕೂಟ ಕಾಲದಲ್ಲಿ ಮತೀಯ ಕಾರ್ಯಗಳಿಗಾಗಿ ಬಳಸಲಾಗುತ್ತಿತ್ತೆಂದು ತೋರುತ್ತದೆ. ದಕ್ಷಿಣ ದಿಕ್ಕಿನ ಕೋಟೆಯಡಿಯ ಬಂಡೆಗಲ್ಲುಗಳಲ್ಲಿ ನಾಲ್ಕು ಗುಹಾಲಯಗಳಿದ್ದು ಅವುಗಳು ದಖನ್ನಿನಲ್ಲೇ ಅತ್ಯಂತ ಪ್ರಮುಖವಾದ ಸರಣಿ ಗುಹಾದೇವಾಲಯಗಳಾಗಿವೆ. ಈ ನಾಲ್ಕು ಗುಹಾಲಯಗಳು ಕ್ರಿ.ಶ. 6-7ನೇ ಶತಮಾನಗಳಿಗೆ ಸೇರಿದ್ದು ಅವುಗಳಿಗೆ ಅವುಗಳ ಸರಿಣಿ ಸಾಲಿನಲ್ಲೇ ಒಂದರಿಂದ ನಾಲ್ಕರವರೆಗೆ ಸಂಖ್ಯೆಗಳನ್ನು ನೀಡಲಾಗಿದೆ. ಇವುಗಳಲ್ಲಿ ಅತ್ಯಂತ ಕೆಳಗಿನದು ಒಂದನೆಯದಾಗಿದ್ದು ಇದು ಶಿವಾಲಯವಾಗಿದೆ. ಮುಂದಿನ ಎರಡು ಅಂದರೆ ಎರಡು ಮತ್ತು ಮೂರನೆಯದು ವೈಷ್ಣವಾಲಯವಾಗಿದ್ದು ಎಲ್ಲಕ್ಕಿಂತ ಮೇಲಿನದು ಅಂದರೆ ನಾಲ್ಕನೆಯದು ಜೈನ ಆಲಯವಾಗಿದೆ. ಎರಡನೆಯ ಮತ್ತು ಮೂರನೆಯ ಗುಹಾಲಯಗಳ ನಡುವೆ ಒಂದು ನೈಸರ್ಗಿಕ ಗುಹಾಸರೆಯ ಗೋಡೆಯ ಮೇಲೆ ಜೀರ್ಣವಾದ ಬೌದ್ಧ ಉಬ್ಬು ಶಿಲ್ಪದ ಕುರುಹುಗಳಿವೆ. ಮೊದಲ ಮೂರು ಗುಹಾಲಯಗಳ ಮುಂದಿನ ಕೈಸಾಲೆಯಲ್ಲಿ ಅಷ್ಟಭುಜಸ್ವಾಮಿ (ವಿಷ್ಣು) ಭೂವರಾಹ, ತ್ರಿವಿಕ್ರಮ, ಅನಂತಶಯನ ಮತ್ತು ನರಸಿಂಹ ಹಾಗೂ ನಟರಾಜ, ಅರ್ಧನಾರೀಶ್ವರ, ಹರಿಹರ ಮುಂತಾದ ಸುಂದರವೂ ಅಮೋಘವೂ ಆದ ಶಿಲ್ಪಗಳಿವೆ. ಈ ಶಿಲ್ಪಗಳು ಅವುಗಳ ಗಾತ್ರ ಸೌಂದರ್ಯ, ಓಜಸ್ಸು ಮುಂತಾದವುಗಳಿಗೆ ಹೆಸರುವಾಸಿಯಾಗಿವೆ. ಚಾಳುಕ್ಯ ದೊರೆ ಮಂಗಲೇಶನು ಮೂರನೆಯ ಗುಹಾಲಯವನ್ನು ಶಕವರ್ಷ 500 (ಕ್ರಿ.ಶ. 578) ರಲ್ಲಿ ಕೊರೆಸಿದನೆಂದು ಅಲ್ಲಿಯ ಶಾಸನ ಹೇಳುತ್ತದೆ. ಲಾವಣ್ಯಪೂರ್ಣವಾದ ಶಾಲಭಂಜಿಕೆಯರ ಬ್ರಾಕೆಟ್ ಶಿಲ್ಪಗಳು ಮತ್ತು ಕಪೋತದ





ಒಳಭಾಗದಲ್ಲಿನ ವರ್ಣಚಿತ್ರಗಳು ಮೂರನೆಯ ಗುಹಾಲಯದ ಸೌಂದರ್ಯವನ್ನು ಇಮ್ಮಡಿಗೊಳಿಸಿದೆ.

ಬಾದಾಮಿ ಚಾಳುಕ್ಯರ ಹಾಗೂ ತದನಂತರದ ನಿರ್ಮಿತಿ ದೇವಾಲಯಗಳು ಅಗಸ್ತ್ಯ ತೀರ್ಥದ ದಂಡೆಯ ಸುತ್ತಲೂ ಹಾಗೂ ಬೆಟ್ಟದ ಮೇಲಿದ್ದು ರಮಣೀಯವಾದ ನೈಸರ್ಗಿಕ ಬೆಟ್ಟಸಾಲಿನ ಹಿನ್ನೆಲೆಯನ್ನು ಹೊಂದಿವೆ. ಈ ನಿರ್ಮಿತಿ ದೇಗುಲಗಳನ್ನು ಕಟ್ಟುವುದರಲ್ಲೂ, ಮಾಲೆಗಿತ್ತಿ ಶಿವಾಲಯ, ಕೆಳಗಿನ ಶಿವಾಲಯ ಹಾಗೂ ಮೇಲಿನ ಶಿವಾಲಯಗಳಲ್ಲಿ ಕಂಡುಬರುವಂತೆ ಚಾಳುಕ್ಯರು ದಾಕ್ಷಿಣಾತ್ಯ ವಿಮಾನ ಮಾದರಿಯ ವಿವಿಧ ಮಜಲುಗಳನ್ನು ಕಂಡರಿಸಿದ್ದಾರೆ.



ಮಾಲೆಗಿತ್ತಿ ಶಿವಾಲಯ

ಅಗಸ್ತ್ಯತೀರ್ಥದ ಉತ್ತರ ದಂಡೆಯ ಮೇಲಿನ ಭೂತನಾಥ ದೇವಾಲಯ ಸಂಕೀರ್ಣ ಮೆಟ್ಟಿಲು ಪಿರಮಿಡ್ಡಿನಾಕಾರದ ಕದಂಬ ನಾಗರ ಶೈಲಿಯ ವಿಮಾನ ಮಾದರಿಯನ್ನು ಹೊಂದಿದೆ. ಬಾದಾಮಿ ಊರಿನ



ಅಗಸ್ತ್ಯತೀರ್ಥ